ಬೀದರ್ ಜಿಲ್ಲೆಯಲ್ಲಿ ಗಂಡೋಲಿ ನಾಲಾ ಹಾಗೂ ಕಾರಂಜಾ ನೀರಾವರಿ ಯೋಜನೆ

678 - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಸಂಕೇಶವರ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಡೋರಿ ನಾಲಾ ನೀರಾವರಿ ಯೋಜನೆಯನ್ನು ಪ್ರಾರಂಭಿಸಲು ತಡವಾಗುತ್ತಿರುವುದಕ್ಕೆ ಕಾರಣ ಏನು?

ಆ) ಕಳೆದ ವರ್ಷ ಹಾಗೂ ಈ ವರ್ಷ ಇದಕ್ಕೆ ಆಯವ್ಯಯದಲ್ಲಿ ನಿಗದಿಪಡಿಸಲಾದ ಹಣ ಎಷ್ಟು?

ಇ) ಕಾರಂಜಾ ಯೋಜನೆಗೆ ಕಳೆದ ಐದು ವರ್ಷದಲ್ಲಿ ಬಿಡುಗಡೆ ಮಾಡಿದ ಹಣ ಎಷ್ಟು ಹಾಗೂ ಈ ವರ್ಷ ಬಿಡುಗಡೆ ಮಾಡಿದ ಹಣ ಎಷ್ಟು?

ಈ) ಕಾರಂಜಾ ಅಣೆಕಟ್ಟು ಭದ್ರತೆಗೆ ಹಾಗೂ ನಾಲಾ ಕೆಲಸಗಳಿಗೆ ಬಿಡುಗಡೆ ಮಾಡಲಾದ ಒಟ್ಟು ಮೊಬಲಗು ಎಷ್ಟು?

ಎ) ಸದರಿ ನಾಲಾ ಕೆಲಸವನ್ನು ಪೂರೈಸಲು ಬೇಕಾಗುವ ಕಾಲಾವಕಾಶ ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಮುಳುಗಡೆ ಪ್ರದೇಶದಲ್ಲಿ ಬರುವ ಬೆಳಕೋಟಾ ಗ್ರಾಮದ ರೈತರು ರಾಜ್ಯದ ಉಚ್ಚ ನ್ಯಾಯಾಲಯದಿಂದ ತಡೆ ಆಜ್ಞೆ ತಂದಿರುವುದರಿಂದ ಯೋಜನೆಯ ಕೆಲಸ ಪ್ರಾರಂಭಿಸಲು ತಡವಾಗುತ್ತಿದೆ.

ಆ) 1992-93ರಲ್ಲಿ ರೂ. 40.00 ಲಕ್ಷಗಳು.
1993-94ರಲ್ಲಿ ರೂ. 300.00 ಲಕ್ಷಗಳು.

ಇ) 1988-89ರಿಂದ 1992-93ರ ವರೆಗೆ ರೂ. 1,766.38 ಲಕ್ಷ ಬಿಡುಗಡೆ ಆಗಿರುತ್ತದೆ. 1993-94ರಲ್ಲಿ ಜುಲೈ 93ರ ಅಂತ್ಯದ ವರೆಗೆ ರೂ. 306.00 ಲಕ್ಷಗಳು ಬಿಡುಗಡೆ ಆಗಿರುತ್ತದೆ.

ಈ) ಭದ್ರತೆಗೆ ಹಣ ಬಿಡುಗಡೆ ಆಗಿರುವುದಿಲ್ಲ. ನಾಲಾ ಕೆಲಸಗಳಿಗೆ ರೂ 1, 477.17 ಲಕ್ಷಗಳು ಬಿಡುಗಡೆ ಆಗಿರುತ್ತದೆ.

ಉ) ಸದರಿ ನಾಲೆ ಕೆಲಸಗಳನ್ನು 1994-95ರ ವೇಳೆಗೆ ಪೂರೈಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮೇಕೆದಾಟು ವಿದ್ಯುತ್ ಘಟಕ

468 - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೇಕೆದಾಟು ವಿದ್ಯುತ್ ಘಟಕದಲ್ಲಿ ಎಷ್ಟು ವಿದ್ಯುತ್ ಉತ್ಪಾದನೆ ಮಾಡಲಾಗುವುದು?

ಆ) ಇದಕ್ಕೆ ತಗಲುವ ಖರ್ಚು ಎಷ್ಟು ಮತ್ತು ನೀರು ಸಂಗ್ರಹಣೆಯಾಗುತ್ತಿರುವ ಮಟ್ಟ ಎಷ್ಟು?

ಇ) ವಿದ್ಯುತ್ ಘಟಕವನ್ನು ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಮಂಜೂರಾತಿ ಮಾಡಲು ಪ್ರಸ್ತಾವನೆಯನ್ನು ಕಳುಹಿಸಿಕೊಡಲು ಸರ್ಕಾರಕ್ಕೆ ಇರುವ ತೊಂದರೆಯೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಈ ಯೋಜನೆಯಲ್ಲಿ 183 ಮೆ.ವ್ಯಾಟ್ ಸಾಮರ್ಥ್ಯದ ಘಟಕವನ್ನು ಸ್ಥಾಪಿಸಲು ಯೋಚಿಸಲಾಗಿದೆ. ಈ ಯೋಜನೆಯ ವಾರ್ಷಿಕ ವಿದ್ಯುತ್ ಉತ್ಪಾದನೆ ಸುಮಾರು

1027 ದಶಲಕ್ಷ ಯೂನಿಟ್‌ಗಳು ಮತ್ತು ಕರ್ನಾಟಕದಲ್ಲಿ ಪೂರ್ಣ ನೀರಾವರಿ ಅಭಿವೃದ್ಧಿಯಾದ ನಂತರ ವಾರ್ಷಿಕ ವಿದ್ಯುತ್ ಉತ್ಪಾದನೆ ಸುಮಾರು 722 ದಶಲಕ್ಷ ಯೂನಿಟ್‌ಗಳು.

ಆ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚ ಸುಮಾರು 262.50 ಕೋಟಿ ರೂಪಾಯಿಗಳು (1981ರ ದರದ ಪಟ್ಟಿ) ಈಗ ಪರಿಶೀಲನೆಯಲ್ಲಿರುವ ಜಲಾಶಯದ ಪೂರ್ಣ ಮಟ್ಟ 472.40 ಮೀ. ಮತ್ತು ಶೇಖರಣಾ ಸಾಮರ್ಥ್ಯ 137.50 ಟಿಎಂಸಿ

ಇ) ಮೇಕೆದಾಟಿನಲ್ಲಿ ವಿದ್ಯುಚ್ಛಕ್ತಿ ಘಟಕವನ್ನು ಸ್ಥಾಪಿಸುವ ಸಾಧ್ಯತೆಯ ಬಗ್ಗೆ ವರದಿಯನ್ನು ತಯಾರಿಸಿ 1982ರಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿತ್ತು. 1984ರಲ್ಲಿ ಕೇಂದ್ರ ಸರ್ಕಾರವು ಕಾವೇರಿ, ನೀರಿನ ಹಂಚಿಕೆಯ ಬಗ್ಗೆ ತಮಿಳುನಾಡಿನೊಂದಿಗೆ ಒಪ್ಪಂದಕ್ಕೆ ಬಂದ ನಂತರ ವಿವರವಾದ ವರದಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲು ಆದೇಶಿಸಿತ್ತು. ಕಾವೇರಿ ಜಲವಿವಾದವು ಇತ್ಯರ್ಥವಾದ ನಂತರ ಮೇಕೆದಾಟು ಜಲವಿದ್ಯುತ್ ಯೋಜನೆಯ ಪರಿಷ್ಕೃತ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು.

ಸಲಾಮವಾಡಿ ಹಾಗೂ ದಡ್ಡಿ ಬ್ಯಾರೇಜ್ ಕೆಲಸಗಳನ್ನು ಪ್ರಾರಂಭ.

12 - ಶ್ರೀ ಮಲ್ಲಾರಿಗೌಡ.ಎಸ್.ಪಾಟೀಲ್ (ಸಂಕೇಶ್ವರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಹುಕ್ಕೇರಿ ತಾಲ್ಲೂಕು ಘಟಪ್ರಭಾ ನದಿ ಮೇಲೆ ಸಲಾಮವಾಡಿ ಯೋಜನೆ ಹಾಗೂ ದಡ್ಡಿ ಬ್ಯಾರೇಜ್ ಕೆಲಸ ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು;

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು.) :

ಅ) ಸಲಾಮವಾಡಿ ಏತ ನೀರಾವರಿ ಯೋಜನೆಯ 22.75 ಲಕ್ಷರೂ.ಗಳ ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ದೊರೆಯುವ ಹಂತದಲ್ಲಿದೆ. ದಡ್ಡಿ ಬ್ಯಾರೇಜ್ ಕಾಮಗಾರಿಯ 48.20 ಲಕ್ಷ ರೂ.ಗಳ ಅಂದಾಜು ಮರು ಪರಿಶೀಲನೆಯಲ್ಲಿದೆ. ಯೋಜನೆಗಳಿಗೆ ಸಕ್ಷಮ ಮಂಜೂರಾತಿ ದೊರೆತ ಮೇಲೆ ಆ ಕೆಲಸಗಳನ್ನೂ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಕೊರಟಗೆರೆ-ಬೈಜಾಪುರ ರಸ್ತೆಟಾರ್.

675 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೊರಟಗೆರ-ಬೈಜಾಪುರ ರಸ್ತೆಯಲ್ಲಿ ಹೊಳವನಹಳ್ಳಿಯಿಂದ ಬೈಜಾಪುರದವರೆಗೆ ಹಾದು ಹೋಗುವ ರಸ್ತೆಯಲ್ಲಿ ಗುಂಡಿಗಳು ಬಿದ್ದು ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಗೆ ಟಾರ್ ಹಾಕುವಂತೆ ಅನೇಕ ಸಾರಿ ಮನವಿ ಮಾಡಿಕೊಂಡಾಗ್ಯೂ ಸಹ ಪ್ರತಿ ಶಾಸಕರಿಗೂ ಕೊಟ್ಟಂತಹ 20 ಲಕ್ಷ ರೂ.ಗಳನ್ನು ವಿನಿಯೋಗಿಸಿ ಕ್ರಮಕೈಗೊಳ್ಳದಿರಲು ಕಾರಣವೇನು;

ಇ) ಸದರಿ ರಸ್ತೆಗೆ ಟಾರ್ ಹಾಕುವ ಕಾಮಗಾರಿಯನ್ನು ಪೂರೈಸಲು ಬೇಕಾಗಿರುವ ಕಾಲಾವಕಾಶವೆಷ್ಟು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ರಸ್ತೆಯು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.